28 December 2025 | Belagavi

# Jamborette Waves
ಜಾಂಬೋರೇಟ್ ವೇವ್ಸ್

The official Newspaper of 29th Karnataka State Jamborette
Powered By Scouting Waves

Vol: 01 | Issue: 02 | Pages: 08

| | |
|---|---|
| ಅತಿಥಿಗಳ ನುಡಿಗಳು | 02 |
| The Path Ahead | 06 |
| Route Map | 08 |




# 29ನೇ ಜಾಂಬೋರೇಟ್‌ಗೆ ಅದ್ದೂರಿ ಚಾಲನೆ



**ಬೆಳಗಾವಿ ಡಿ.27:** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಬೆಳಗಾವಿ ಜಿಲ್ಲಾ ಪಂಚಾಯತ್ ಮತ್ತು ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಸಂಸ್ಥೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಹೊನಗಾ ಗ್ರಾಮದ ಫೀನಿಕ್ಸ್ ಪ್ಲಿಕ್ ಶಾಲೆಯಲ್ಲಿ ಏರ್ಪಡಿಸಿರುವ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್ ಗೈಡ್ಸ್ ಜಾಂಬೋರೇಟ್ ಇದರ ಉದ್ಘಾಟನಾ ಸಮಾರಂಭ ಶನಿವಾರ ನಡೆಯಿತು.

ಬೆಳಗಾವಿಯಲ್ಲಿ ನಡೆದ ಜಾಂಬೋರೇಟ್ ಉದ್ಘಾಟನಾ ಕಾರ್ಯಕ್ರಮವು ಸ್ಕೌಟ್ ಪ್ರಾರ್ಥನೆಯೊಂದಿಗೆ ಆರಂಭವಾಯಿತು.



**ಜಾಂಬೋರೇಟ್ ವಿಶೇಷ ಸಂಚಿಕೆ ಬಿಡುಗಡೆ**

ಗಜಾನನ ಮನ್ನಿಕೇರಿಯವರು ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು. ರಾಜ್ಯ ಮುಖ್ಯ ಆಯುಕ್ತರಾದ ಪಿ.ಜಿ.ಆರ್. ಸಿಂಧ್ಯ ಅವರು ಪ್ರಾಸ್ತಾವಿಕ ಭಾಷಣದಲ್ಲಿ ಸ್ಕೌಟ್ ಚಳುವಳಿ ಸದಾ ಜೀವಂತವಾಗಿರಬೇಕು ಎಂದು ತಿಳಿಸಿದರು. ಮಕ್ಕಳಲ್ಲಿ ಶಿಸ್ತು, ಸೇವಾ ಮನೋಭಾವ ಮತ್ತು ಸಹಬಾಳ್ವೆ ಬೆಳೆಸುವಲ್ಲಿ ಸ್ಕೌಟ್ ಚಳುವಳಿಯ ಪಾತ್ರವನ್ನು ಅವರು ಒತ್ತಿ ಹೇಳಿದರು.

ಕಲರ್ ಪಾರ್ಟಿಯಿಂದ ಧ್ವಜಾರೋಹಣ ನೆರವೇರಿತು. ಮಾನ್ಯ ಸಭಾಧ್ಯಕ್ಷರಾದ ಯು.ಟಿ. ಖಾದರ್ ಅವರು ಜಾಂಬೋರೇಟ್ ಜ್ಯೋತಿಯನ್ನು ಬೆಳಗಿಸಿದರು. ಬೆಳಗಾವಿಯ ಸ್ಕೌಟ್ ಮಣಿಕಂಠ ಜ್ಯೋತಿಯನ್ನು ಹಿಡಿದು ಪ್ರತಿ ಜಿಲ್ಲೆಗೆ ಸಾಗಿ ಬಂದ ಸಂದರ್ಭದಲ್ಲಿ ಜಿಲ್ಲೆಯ ಮುಖ್ಯಸ್ಥರುಗಳಾದ ಗಜಾನನ ಮನ್ನಿಕೇರಿಯವರು ಹಾಗೂ ಪ್ರಭಾವತಿ ಪಾಟೀಲ ಜ್ಯೋತಿಯನ್ನು ಬರಮಾಡಿಕೊಂಡರು.

ಘನವೆತ್ತ ರಾಜ್ಯಪಾಲರಾದ ಶ್ರೀ ಥಾವರಚಂದ್ ಗೆಹ್ಲೋಟ್‌ರವರ ಸಂದೇಶವನ್ನು ವಾಚಿಸಲಾಯಿತು.

ಜಾಂಬೋರೇಟ್ ಬಲೂನುಗಳನ್ನು ಬಾನಿಗೆ ಹಾರಿಸಿದ ಕ್ಷಣ ಮಕ್ಕಳ ಸಂತಸಕ್ಕೆ ಮಿತಿ ಇರಲಿಲ್ಲ. ಆ ಕ್ಷಣವು ಜಾಂಬೋರೇಟ್‌ನ ಉತ್ಸಾಹ ಮತ್ತು ಏಕತೆಯ ಸಂಕೇತವಾಯಿತು. ಎಂ.ಎ. ಖಾಲಿದ ಅವರು ಪಿ.ಜಿ.ಆರ್. ಸಿಂಧ್ಯ ಅವರಿಗೆ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಕೇವಲ ಚಳುವಳಿಯಲ್ಲ, ಅದು ಜೀವನ ಪಾಠ ಎಂದು ಜಗದೀಶ್ ಶೆಟ್ಟರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಸಭಾಧ್ಯಕ್ಷರಾದ ಯು.ಟಿ. ಖಾದರ ಅವರು ತಮ್ಮ ಸ್ಕೌಟ್ ಬಾಲ್ಯದ ನೆನಪುಗಳನ್ನು ಹಂಚಿಕೊಂಡು, ಹಾಡೊಂದನ್ನು ಹಾಡುವ ಮೂಲಕ ಮಕ್ಕಳ ಮನ ಗೆದ್ದರು.

> ತಮ್ಮ ಬಾಲ್ಯದ ಸ್ಕೌಟ್ ಅನುಭವಗಳನ್ನು ನೆನೆದು ಕಾರ್ಮಿಕವಾಗಿ ಮಾತನಾಡಿ, ಕವಿ ಒಬ್ಬರು ಹೇಳಿದ ಹಾಡನ್ನು ಹಾಡುವ ಮೂಲಕ ಮಕ್ಕಳ ಮನಸೆಳೆದರು. ಅವರು ಹಾಡಿದ ಹಾಡು ಇಂತಿದೆ. **"ಹಸುರಿನ ಹಾಸ್ಯದ ಮರುಳಿನ ಲಾಸ್ಯದ ಬೆಳಗಾವಿ ಊರಿನ ಸೊಬಗಿನ್ಯಾಗ, ಈ ಚಂದದ ಮಕ್ಕಳ ನಲಿವಿನಯಾಗ"**

ಸ್ಕೌಟ್ಸ್ ಗೈಡ್ಸ್ ಕೇಂದ್ರ ಮುಖ್ಯಸ್ಥರಾದ ಡಾ. ಕೆ.ಕೆ. ಖಂಡೇಲವಾಲ ಅವರು ಮಾತನಾಡಿ, ಕ್ರಾಂತಿವೀರರ ನಾಡಾದ ಬೆಳಗಾವಿಯ ಸ್ವಾತಂತ್ರ್ಯ ಹೋರಾಟದ ಮೊದಲ ಮಹಿಳಾ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಬಲಿದಾನವನ್ನು ಸ್ಮರಿಸಿದರು. ಅವರ ಕನ್ನಡ ಭಾಷಣ ಶ್ರೋತೃಗಳನ್ನು ಆಕರ್ಷಿಸಿತು.

ಮಾನ್ಯ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಮಾತನಾಡಿ, ಮಾನವೀಯತೆ ಬೆಳೆಸುವಲ್ಲಿ ಸ್ಕೌಟ್-ಗೈಡ್ಸ್ ಚಳುವಳಿಗೆ ಶಿಕ್ಷಣ ಇಲಾಖೆ ಸದಾ ಬೆಂಬಲ ನೀಡಲಿದೆ ಎಂದು ಹೇಳಿದರು. ರಾಜ್ಯದ ಎಲ್ಲಾ ಕೆಪಿಎಸ್ ಶಾಲೆಗಳಲ್ಲಿ ಸ್ಕೌಟ್ಸ್-ಗೈಡ್ಸ್ ಕಡ್ಡಾಯವಾಗಲಿದೆ ಎಂದು ಘೋಷಿಸಿದರು.

ಉಸ್ತುವಾರಿ ಸಚಿವರಾದ ಶ್ರೀ ಸತೀಶ್ ಜಾರಕಿಹೊಳಿಯವರು ಸ್ಕೌಟಿಂಗ್ ಎಲ್ಲರ ಕಣ್ಣನ್ನು ತೆರೆಸಿ ಉಜ್ವಲ ಭವಿಷ್ಯ ನಿರ್ಮಾಣದ ಮಾಧ್ಯಮವಾಗಿದೆ ಎಂಬ ಇಂಗಿತ ವ್ಯಕ್ತಪಡಿಸಿದರು.

ಮುಕ್ತಿಮಠದ ಸೋಮೇಶ್ವರ ಶಿವಾಚಾರ್ಯ ಸ್ವಾಮಿಗಳ ಎಲ್ಲರಿಗೆ ತಮ್ಮ ಮಾತುಗಳಲ್ಲಿ ಆಶೀರ್ವದಿಸಿದರು.

ಅಂತರಾಷ್ಟ್ರೀಯ ಹೆಚ್ಚುವರಿ ಆಯುಕ್ತ ಎ. ಎಸ್. ಮಧುಸೂದನ್, ಶಿಕ್ಷಣ ಇಲಾಖೆಯ ಉಪನಿರ್ದೇಶಕ ಲೀಲಾವತಿ ಹಿರೇಮಠ ಹಾಗೂ ಸ್ಥಾನಿಕ ಆಯುಕ್ತ ರಾಜಶೇಖರ ಚಳಗೇರಿ, ಎ.ಆರ್.ಅಂಬಗಿ, ಎನ್.ಆರ್. ಮೆಳವಂಕಿ, ಎಂ.ಎಂ.ಪಾಟೀಲ, ಬೆಳಗಾವಿ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಕೆ.ಆಂಜನೇಯ, ಭಾರತ ಸ್ಕೌಟ್ಸ್ ಗೈಡ್ಸ್ ರಾಜ್ಯ ಸಹಾಯಕ ಆಯುಕ್ತೆ ಪ್ರಭಾವತಿ ಪಾಟೀಲ, ರಾಜ್ಯ ಕೋಶಾಧಿಕಾರಿ ಟಿ. ಪ್ರಭಾಕರ, ಡಿಓಟಿ ರಾಜಕುಮಾರ ಕುಂಬಾರ, ನಾಗೇಶ ಶಿವಾಪುರ, ವಿಠ್ಠಲ ಎಸ್, ಹನುಮಂತ ಭಜಂತ್ರಿ, ಶಿವರಾಯ ಏಳುಕೋಟಿ ಹಾಗೂ ಕರ್ನಾಟಕ ರಾಜ್ಯ ಸ್ಕೌಟ್ಸ್ ಗೈಡ್ಸ್ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಬರಶೆಟ್ಟಿ ಹಾಗೂ ಕುಮಾರಿ ಹೊನ್ನಮ್ಮ ಅವರು ಸಮರ್ಥವಾಗಿ ನಿರೂಪಿಸಿದರು.

# ಅತಿಥಿಗಳ ನುಡಿಗಳು



The Chief National Commissioner of the Bharat Scouts and Guides, Dr. K K Khandelwal issued a warm welcome to all the participants of the jamborette while reminding the significance of the Belagavi District that gave us the fearless queen Kittur Rani Chennamma and the revolutionary hero Krantiveera Sangolli Rayanna while urging everyone to serve the nation with the same commitment, courage and character as scouts and guides. A call to resourcefully engage at the jamborette to learn, grow and develop themselves while actively participating in the activities was made to all the young people. Sincere gratitude and thanks was expressed to all the dignitaries for dedicating their time and resources towards the event. The jamborette in turn reflects the true spirit of scouting and guiding while showcasing the vibrant nature of gatherings. The message concluded with wishing everyone the best for their new adventure and hoped for the grand success of the jamborette.



The Governor of Karnataka Shri. Thawar Chand Gehlot serving as the Patron of the Bharat Scouts and Guides, Karnataka congratulated the organisation and wished the best for the overall success of the jamborette. The governor highlighted the significance of scouting and guiding while underlining its role in transforming young people into active global citizens contributing towards creating a better world. An urge to resourcefully utilise the opportunity and learn everything possible from the jamborette was issued with the hope that it serves the best interests of young people. The message concluded with the hope of creating a better world together. The jamborette serves as a powerful platform for channelising the energy of young people and would in turn produce a profound positive impact on the society.

*This message was delivered to the Jamborette on behalf of the governor, to all the young people*

## ಕಾಯಕವೇ ಕೈಲಾಸ ಮಾತು ಎಲ್ಲರಿಗೂ ಆದರ್ಶ

ಸ್ಕೌಟ್ಸ್ ಗೈಡ್ಸ್ ಆದರ್ಶ ಜೀವನಕ್ಕೆ ಅನುಕೂಲ. ನೀವೆಲ್ಲರೂ ಜೀವನದಲ್ಲಿ ಅತೀ ಉನ್ನತ ಮಟ್ಟಕ್ಕೆ ಏರುವುದರಲ್ಲಿ ಯಾವುದೇ ಸಂಶಯವಿಲ್ಲ. ಬಸವಣ್ಣನವರ ಕಾಯಕವೇ ಕೈಲಾಸ ಮಾತಿನಂತೆ ಈ ಕಾರ್ಯಕ್ರಮ ನಿಮ್ಮೆಲ್ಲರಿಗೂ ಆದರ್ಶಪ್ರಾಯವಾಗಲಿ. ನೀವು ದೇಶಪ್ರೇಮ ಬೆಳೆಸಿಕೊಂಡು ದೇಶಭಕ್ತರಾಗಬೇಕು. ಮುಂದಿನ ದಿನಗಳಲ್ಲಿ ನೀವೆಲ್ಲರೂ ಈ ದೇಶದ ಶ್ರೇಷ್ಠ ನಾಗರಿಕರಾಗಿ ಹೊರಹೊಮ್ಮುವ ನಾಗರಿಕರಾಗಬೇಕು.



**ಬಸವರಾಜ ಹೊರಟ್ಟಿ**
ವಿಧಾನ ಪರಿಷತ್ ಸಭಾಪತಿ

## ನಾವೆಲ್ಲರೂ ಒಂದು ಎಂದು ಸಾರುವುದೇ ಸ್ಕೌಟ್ಸ್ ಗೈಡ್ಸ್ ಉದ್ದೇಶ

ಇಂಗ್ಲೆಂಡ್ ನಲ್ಲಿ ಸ್ಕೌಟ್ಸ್ ಗೈಡ್ಸ್ ಆರಂಭವಾದ ಒಂದೆರಡು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಆರಂಭಿಸಿದರು. ಅಂತಹ ಹಿನ್ನೆಲೆ ಈ ಸಂಸ್ಥೆಗೆ ಇದೆ.

ಸ್ಕೌಟ್ಸ್ ಗೈಡ್ಸ್ ರಾಜ್ಯ ಉಪಾಧ್ಯಕ್ಷ ಗಜಾನನ ಮನ್ನಿಕೇರಿ ಈ ನಾಡಿನ ದಕ್ಷ ಅಧಿಕಾರಿ. ಅವರ ನೇತೃತ್ವದಲ್ಲಿ ಈ ಜಾಂಬೋರೇಟ್ ನಡೆಯುತ್ತಿದೆ. ಏಳು ದಿನಗಳ ಕಾಲ ಈ ಕಾರ್ಯಕ್ರಮ ನಡೆಯಲಿದೆ.

ಮಕ್ಕಳನ್ನು ಜಾತಿ-ಧರ್ಮ ಮೀರಿ ಬೆಳೆಯುವ ನಿಟ್ಟಿನಲ್ಲಿ ನಾವೆಲ್ಲರೂ ಒಂದು ಎನ್ನುವುದು ಸ್ಕೌಟ್ಸ್ ಗೈಡ್ಸ್ ಉದ್ದೇಶವಾಗಿದೆ. ಮಕ್ಕಳು ಗುಂಪು ಚಟುವಟಿಕೆ ಮಾಡಬೇಕು. ಈ ದಿಸೆಯಲ್ಲಿ ಸ್ಕೌಟ್ಸ್ ಗೈಡ್ಸ್ ಕೆಲಸ ಮಾಡಲಿದೆ.



**ಪಿಜಿಆರ್ ಸಿಂಧಿಯಾ**
ಭಾರತ್ ಸ್ಕೌಟ್ಸ್ ಗೈಡ್ಸ್ ಕರ್ನಾಟಕ ರಾಜ್ಯ ಮುಖ್ಯ ಆಯುಕ್ತರು

## ಶಿಸ್ತುಬದ್ಧ ಜೀವನ ನಡೆಸಲು ಶಿಬಿರ ಅನುಕೂಲ

ಕಾರ್ಯಕ್ರಮದ ಮುಖ್ಯ ರೂವಾರಿಯಾಗಿರುವ ಪಿಜಿಆರ್ ಸಿಂಧ್ಯಾ ಅವರೊಂದಿಗೆ ಎಬಿವಿಪಿಯಲ್ಲಿ ಒಟ್ಟಾಗಿ ಕೆಲಸ ಮಾಡಿದ್ದೇನೆ. ಸ್ಕೌಟ್ಸ್ ಗೈಡ್ಸ್ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ಜೀವನಕ್ಕೆ ಅನುಕೂಲವಾಗಲಿದೆ. ವಿದ್ಯಾರ್ಥಿಗಳು ಭವಿಷ್ಯದ ದಿನಗಳಲ್ಲಿ ಶಿಸ್ತುಬದ್ಧವಾಗಿ ಜೀವನ ನಡೆಸುವಂತಾಗಲು ಈ ಕಾರ್ಯಕ್ರಮದಿಂದ ಹೆಚ್ಚಿನ ಲಾಭವಾಗಲಿದೆ.



**ಜಗದೀಶ್ ಶೆಟ್ಟರ್**
ಮಾಜಿ ಮುಖ್ಯಮಂತ್ರಿ ಮತ್ತು ಬೆಳಗಾವಿ ಸಂಸದ

## ಸ್ಕೌಟ್ಸ್ ಗೈಡ್ಸ್‌ನಲ್ಲಿ ಸಿಗುವ ತರಬೇತಿಯಿಂದ ದೇಶದ ಸತ್ಪ್ರಜೆಗಳಾಗಬಹುದು

ಬಲಿಷ್ಠ ರಾಷ್ಟ್ರ ನಿರ್ಮಾಣ ನಿಮ್ಮಿಂದ ಸಾಧ್ಯ. ನೀವು ಕೇವಲ ನಿಮ್ಮ ತಂದೆ-ತಾಯಿಯ ಸಂಪತ್ತು ಮಾತ್ರವಲ್ಲ. ಇಡೀ ದೇಶದ ಸಂಪತ್ತಾಗಬೇಕು. ನಾನು ಐದನೇ ತರಗತಿಯಲ್ಲೇ ಸ್ಕೌಟ್ಸ್ ಗೈಡ್ಸ್ ಸೇರಿದ್ದೆ. ನಾನು ಇಂದು ಈ ಸ್ಥಾನ ಹೊಂದಲು ಸ್ಕೌಟ್ಸ್ ಗೈಡ್ಸ್ ಕಾರಣ.

ಭಾರತ ಜಗತ್ತಿನ ನಂಬರ್ ಒನ್ ಆಗಲು ನಿಮ್ಮಂತ ಶ್ರೇಷ್ಠ ವಿದ್ಯಾರ್ಥಿಗಳಿಂದ ಮಾತ್ರ ಸಾಧ್ಯ. ಆ ನಿಟ್ಟಿನಲ್ಲಿ ನೀವು ರೂಪುಗೊಳ್ಳಬೇಕು. ನೀವೆಲ್ಲರೂ ಸತ್ಪ್ರಜೆಯಾಗಲು ಸ್ಕೌಟ್ಸ್ ಗೈಡ್ಸ್ ನಿಂದ ಸಿಗುವ ತರಬೇತಿಯಿಂದ ಮಾತ್ರ ಸಾಧ್ಯ. ಮುಂದಿನ ಐದಾರು ವರ್ಷ ಕಷ್ಟ ಅನುಭವಿಸಬಹುದು. ಆದರೆ, ಇದು ನಿಮ್ಮ ಮುಂದಿನ ಬಾಳಿಗೆ ಬೆಳಕಾಗಲಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ, ಪಾಲಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳನ್ನು ಕರೆ ತಂದ ಶಿಕ್ಷಕರಿಗೂ ಅಭಿನಂದಿಸಿದರು.

ಸಿಕ್ಕ ಅವಕಾಶವನ್ನು ಬದ್ಧತೆಯಿಂದ ಬಳಸಿಕೊಳ್ಳಲು ನಿಮಗೆ ಉತ್ತಮ ಅವಕಾಶ ಬಳಸಿಕೊಂಡು ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ಮುಂದಿನ 50 ವರ್ಷದ ಗುರಿಯನ್ನಿಟ್ಟುಕೊಳ್ಳಿ ಶಿಕ್ಷಿತರಿಂದಲೇ ಭ್ರಷ್ಟಾಚಾರ ನಡೆಯುತ್ತಿದೆ. ಕಮ್ಯುನಲ್ ಆಗುತ್ತಿದ್ದಾರೆ. ಇಂತಹ ಕಾಲಘಟ್ಟದಲ್ಲಿ ನಾವು ತಲುಪಿದ್ದೇವೆ. ಯಾಕೆ ಅಂದರೆ ಅವರಿಗೆ ನಿಮಗೆ ಸಿಕ್ಕಿರುವಂತಹ ಟ್ರೈನಿಂಗ್ ಸಿಕ್ಕಿಲ್ಲ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.



**ಯು. ಟಿ. ಖಾದರ್**
ಸ್ಪೀಕರ್, ಕರ್ನಾಟಕ ವಿಧಾನಸಭೆ

## ಸ್ಕೌಟ್ಸ್ ಗೈಡ್ಸ್ ಗೆ ಹೆಚ್ಚಿನ ಒತ್ತು

ಪರಿಸರ ರಕ್ಷಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ನಿಮ್ಮನ್ನು ಸಕ್ರಿಯವಾಗಿ ತೊಡಗಿಸಲು ಪ್ರಯತ್ನ ಮಾಡಲಾಗುತ್ತದೆ. ನಮಗೂ ಅವಕಾಶ ಸಿಕ್ಕಾಗ ದೇಶದಲ್ಲೇ ಒಂದು ಪ್ರಗತಿಶೀಲ ಸಂಸ್ಥೆಯನ್ನಾಗಿ ರೂಪಿಸಲಾಗುತ್ತದೆ. ಭವಿಷ್ಯತ್ತಿನಲ್ಲಿ ಇನ್ನೂ ಹೆಚ್ಚಿನ ಒತ್ತನ್ನು ಸ್ಕೌಟ್ಸ್ ಗೈಡ್ಸ್ ಗೆ ನೀಡಲಾಗುತ್ತದೆ.



**ಸತೀಶ ಜಾರಕಿಹೊಳಿ**
ಲೋಕೋಪಯೋಗಿ ಸಚಿವ

## ನನ್ನ ಕಣ್ಣು ತೆರೆಸಿದ ಸ್ಕೌಟ್ಸ್ & ಗೈಡ್ಸ್ ಸಂಘಟನೆ

ಇದು ನನ್ನ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮ. ಇಂದು ನನ್ನ ಕಣ್ಣು ತೆರೆದಿದೆ. ರಾಜ್ಯದ ವಿವಿಧ ಭಾಗದಿಂದ ತಮ್ಮ ಮಕ್ಕಳನ್ನು ಇಷ್ಟು ದೂರ ಕಳಿಸಿದ್ದಾರೆ. ನಮ್ಮ ಸರ್ಕಾರ ಮಾನವೀಯ ಮೌಲ್ಯದ ಮೇಲೆ ನಡೆಯುವ ಸರ್ಕಾರ. ಸ್ಕೌಟ್ಸ್ ಗೈಡ್ಸ್ ನ್ನು ಮುಂದಿನ ದಿನಗಳಲ್ಲಿ ಕೆಪಿಎಸ್ ಶಾಲೆಗಳಲ್ಲಿ ಕಡ್ಡಾಯವಾಗಲು ಪ್ರಯತ್ನ ಪಡುತ್ತೇನೆ. ನೀವೆಲ್ಲರೂ ಭಾರತದ ಉಜ್ವಲ ನಾಗರಿಕರಾಗಬೇಕು.



**ಮಧು ಬಂಗಾರಪ್ಪ**, ಶಾಲಾ ಶಿಕ್ಷಣ ಸಚಿವ

## ಮಕ್ಕಳ ಸರ್ವತೋಮುಖ ವೃದ್ಧಿಗೆ ಮುನ್ನುಡಿ

ಬೆಳಗಾವಿಯಲ್ಲಿ ನಡೆದಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಜಂಬೊರೇಟ್ ಇದು ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಪ್ರೋತ್ಸಾಹಕ್ಕೆ ಮುನ್ನುಡಿ. ಇಂತಹ ಸಂಘಟನೆ ಸಂಘಟನಾತ್ಮಕ ಚಟುವಟಿಕೆಗಳಿಂದ ಮಕ್ಕಳ ವಿಕಾಸ ಸಾಧ್ಯ. ಇಲ್ಲಿನ ಪರಿಸರ ಮಕ್ಕಳ ಮನವನ್ನು ಆಕರ್ಷಿಸುತ್ತದೆ. ಸ್ಕೌಟ್ಸ್ ಮಕ್ಕಳ ಮೇಳಕ್ಕೆ ಶುಭವಾಗಲಿ, ಕಾರ್ಯಕ್ರಮ ಯಶಸ್ವಿಯಾಗಲಿ.



**ಶಿವಾಚಾರ್ಯ ಸ್ವಾಮೀಜಿಗಳು**,
ಮುಕ್ತಿ ಮಠ, ಬೆಳಗಾವಿ

# Today's Schedule

| | |
|---|---|
| 06:00 AM | Rouse |
| 09:00 Am - 1 PM | Module Activities:<br>1. Adventure Valley<br>2. Hike and community service<br>3. Scout skillo Sustainable<br>4. SDG HUB<br>5. Exhibition organized by various de-partments & Districts<br>6. Educational tour<br>7. Forest Trail<br>8. Fun in Farm<br>9. Scout Skillo |
| 11.00 A.M. | Contingent Leaders Meeting |
| 01:00 PM | Lunch |
| 02:30- 04:30 | 1. Food Plaza and District Exhibition<br>2. Colour Party Competition<br>3. Band Display Competition<br>4. Quiz  Competition |
| 05:00 PM | Night Hike |
| 06:00 PM - 07:00 PM | 1. "Punyakoti" Dance Drama<br>2. "Rani Chennamma" dance Drama |
| 08:30 PM | Folk Dance Dance Competetion |
| 10:00 PM | Lights off |

## WEATHER REPORT

29° Hi

RealFeel® 29°

RealFeel Shade™ 27°

Hazy sunshine

| | | | |
|---|---|---|---|
| Max UV Index | 5.0 (Moderate) | Probability of Precipitation | 0% |
| AccuLumen Brightness Index™ | 10 (Very Bright) | Probability of Thunderstorms | 0% |
| Wind | ESE 11 km/h | Precipitation | 0.0 mm |
| Wind Gusts | 33 km/h | Cloud Cover | 0% |



# ಚುಮು-ಚುಮು ಚಳಿಯಲಿ ಚುರುಕಿನ ದಿನಚರಿ

ಬೆಳಗಿನ ಕೊರೆವ ಚಳಿ, ಇನ್ನೂ ಮಲಗಬೇಕೆನ್ನುವ ಮನಸ್ಸಿನ ಮಕ್ಕಳು, ಎದ್ದೇಳಿ ಎನ್ನುವ ದಳನಾಯಕರ ಕೂಗು, ಇಂದಿನ ಮುಂಜಾವಿನ ಕಿವಿನಾದ. ಮುಂಜಾನೆಯಾಗಿದ್ದೇ ತಡ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ಕಲರವ ಎಲ್ಲೆಡೆ ಶುರುವಾಯಿತು.

ಚಳಿಯ ಉಡುಪುಗಳನ್ನು ಧರಿಸಿ, ಮಕ್ಕಳು ದೈನಂದಿನ



ಕಾರ್ಯವನ್ನು ಮುಗಿಸಿಕೊಂಡು, ಚುರುಕಾಗಿ ಟೆಂಟ್ ಸುತ್ತಮುತ್ತಲಿನ ಪರಿಸರ ಸ್ವಚ್ಛಗೊಳಿಸಿ, ಸಮವಸ್ತ್ರದಲ್ಲಿ ತಯಾರಾದ ಮರಿ ಸೈನ್ಯ ಅಗ್ರಗಾಮಿತ್ವದ ಚಟುವಟಿಕೆಗಳಲ್ಲಿ



> "ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ ಹಿಗ್ಗದೆಯ ಕುಗ್ಗದೆಯ ನುಗ್ಗಿ ನಡೆ ಮುಂದೆ" ನಮ್ಮ ಕವಿವಾಣಿಯಂತೆ ಬೆಳಗಾವಿಗೆ ಆಗಮಿಸಿದ ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿವಿಧ ಜಿಲ್ಲೆಗಳ ತಂಡಗಳು 'ತಾ ಮುಂದೆ ನಾ ಮುಂದೆ' ಎನ್ನುವ ಸಾಮರ್ಥ್ಯ ಪ್ರದರ್ಶನ ಇಂದು ಹೊನಗಾದ ಮಕ್ಕಳ ಮೇಳದಲ್ಲಿ ಕಂಡುಬಂದಿತು.

ತೊಡಗಿದರು. ಕೆಲವರು ತಮ್ಮ ಟೆಂಟಿನ ಮುಂದೆ ಸ್ಟೇವ್ಸ್ ಬಳಸಿ ಆವರಣ ನಿರ್ಮಿಸಿದರೆ, ಕೆಲವರು ವಿವಿಧ ಉಪಯುಕ್ತ ಆಕೃತಿಗಳನ್ನು ನಿರ್ಮಿಸಿದರು. ನಂತರ ಸಬ್ ಕ್ಯಾಂಪ್ ಚೀಫ್ಸ್ ಮತ್ತು ಸಂಬಂಧಪಟ್ಟ ದಳ ನಾಯಕರೊಂದಿಗೆ ದಿನದ ಸ್ಕೌಟ್ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಪಡೆದರು. ದಿನದ ಕೇಂದ್ರಬಿಂದು 29ನೇ ಜಾಂಬೋರೇಟ್ ಉದ್ಘಾಟನಾ ಸಮಾರಂಭ. ಎಲ್ಲರೂ ಅದರ ಸಿದ್ಧತೆಗಳಲ್ಲಿ ತೊಡಗಿದರು. ಕಲರ್ ಪಾರ್ಟಿ



ಚಟುವಟಿಕೆಯ ಸಿದ್ಧತೆ ಭರದಿಂದ ಸಾಗಿದವು.

ಇನ್ನೊಂದೆಡೆ, ಪಥಸಂಚಲನದ ಅಂತಿಮ ತಯಾರಿಗಾಗಿ ಅನೇಕ ಬಾರಿ ಪೂರ್ವ ಸಿದ್ಧತೆಯನ್ನು ಮಾಡುತ್ತಿರುವ ನೋಟ ನೆರೆದವರ ಗಮನ ಸೆಳೆಯಿತು. ತದನಂತರ ತಮ್ಮದೇ ಹುಮ್ಮಸ್ಸಿನಲ್ಲಿ ತಂತಮ್ಮ ತಂಡಗಳನ್ನು ಸಾಧನೆಗಳನ್ನು ಹೊಗಳಿಕೊಳ್ಳುತ್ತಾ ನಿಂತಿರುವ ನೋಟ



ಗಮನ ಸೆಳೆಯಿತು. ಮಧ್ಯಾಹ್ನ ಹಾಗೂ ರಾತ್ರಿ ಊಟವನ್ನು ಸವಿದ ಮಕ್ಕಳು, ಬೆಳಗಾವಿ ಜಿಲ್ಲೆಯ ಸ್ಥಳೀಯ ವಿದ್ಯಾರ್ಥಿಗಳು ಪ್ರದರ್ಶಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೌತುಕದಿಂದ ವೀಕ್ಷಿಸಿ, ತಮ್ಮ ಟೆಂಟಿಗೆ ತೆರಳಿ ನಿದ್ದೆಗೆ ಜಾರಿದರು.



# GEAR UP FOR THE ADVENTURE OF EARNING BADGES EMBARK ON THE JOURNEY OF LEARNING AND EXPLORING

The 29th State Jamborette is unique and distinctive in its nature and organisational methodology considering the approach adhered to involve, engage, and empower young people to become leaders of today while constructively contributing towards creating a better world. The activities in the form of differentiated and progressive challenge badges will in turn help scouts employ and judiciously channelise their skill sets while constantly developing holistic competencies that would ensure that they are ready for life. The jamborette will help them gear up for the adventure of earning badges while ensuring that young people embark on the journey of learning and exploring during the course of the event.




## EDUCATIONAL TOUR CHALLENGE BADGE

e educational tour challenge badge is nnected to comprehending the rich culure and heritage while deriving meaningful interpretations and learnings from the history of the the Belagavi district. This will indeed equip participants with requisite knowledge and awareness associated with the region where the jamborette is being conducted while providing an opportunity to understand and link their participation with the grassroots of the district. The badge will be made available to individuals who successfully complete the educational tour while actively engaging the varied tasks organised within the tour for enhancing their experience and maximising their exposure in general.




## ADVENTURE VALLEY CHALLENGE BADGE

e jamborette will be incomplete without un adventure base including different asks and physically challenging activities for engaging the participants. From rock climbing activities to rope bridges, from transcending simple barriers to overcoming complex obstacles, the adventure base will definitely test the limits of all the participants while highlighting the importance of robust physical health. It in turn reiterates the scouting spirit of remaining adventurous and being prepared to face all forms of challenges while navigating through unexpected tasks in general. This badge will directly contribute towards the physical development of young people.




## HIKE CHALLENGE BADGE

other crucial test for physical endurce is the hike where the participants will e required to walk across varying terrains while using their mapping and camping skills to reach the designated location in the stipulated timeline. It tests the degree of preparedness among the young people to complete a physically strenuous task while building their physical & mental strength. Team spirit & coordination will be one of the skill sets that would be tested to achieve the badge while successfully executing the additional tasks which would be provided during the course of the hike.




## SCOUTS FOR SDGS CHALLENGE BADGE

This badge is associated with developing strong understanding of the different sustainable development goals while mapping the same to the proficiency badge program of the BSG. It involves securing knowledge on the Scouts for SDGs Framework and understanding the progressive thematic areas under the same which include the Earth Tribe, Messengers of Peace, Health Allies, and Life Leaders in specific. Gaining exposure & understanding the approach for formulating content and accessing information on the SDG Hub is an inalienable part of this challenge badge.







## SCOUT SKILLO CHALLENGE BADGE

The jamborette has a designated workshop and training station for young people to develop skill sets that are deemed essential for life through undertaking progressive and differentiated scouting activities. The activities range from simple kite making to formulating your own woggles using available resources and using leaves to create art masterpieces. The scout skillo challenge badge will in turn help develop essential survival skills among the attendees which will include but is not limited to backwoodsman cooking, constructing pioneering models and CPR training. Lastly, the workshop will engage young people to create attractive posters and creative postcards delivering a social message.




## FUN BASE CHALLENGE BADGE

the name indicates, the challenge badge associated with having fun through de-igned activities which include but is not limited to archery, memory games, sense games and guessing games. It will include engaging and entertaining activities that will help young people rejuvenate their energy while being reminded to have loads of fun in the jamborette. Including lemon and the spoon game, slide games, balancing games and ballon games, the fun bases will in turn be one of the most enjoyable activities that can be undertaken during the course of the jamboree.




## FOREST TRAIL CHALLENGE BADGE

s challenge badge helps young people nnect with Mother Nature while un-erstanding the various species of flora and fauna while at the same time understanding the role of scouts and guides in engaging in activities concerning environmental conservation and commitment towards mobilising young minds in the direction of sustainability. The badge involves the participants to navigate effectively through the nature trail and engage in meaningful conversations revolving around the significance and role of forests in the ecosystem. The badge bridges the gap between nature and young people.

Each challenge badge has multiple activities and diverse options Specially planned and multiple options, participants can choose to firstly complete the minimum assigned number of activities across all badges before coming back to other residual activities of their interest to ensure that they have time to explore everything. Earning all the challenge badges would make the young person eligible to receive the Jamborette Award which recognises the stupendous efforts and active participation across all the different disciplines of the the jamborette. This is a momentous award that can be achieved by all the young people, Let's go, explore, learn and earn the badges. What is Stopping You ?

















# GLIMPSES OF THE JAMBORETTE WORLD























# JAMBORETTE DECLARED OPEN









## 29ನೇ ಕರ್ನಾಟಕ ರಾಜ್ಯ ಜಾಂಬೋರೇಟ್‌ನ ಪೋಸ್ಟಲ್ ಕವರ್ ಬಿಡುಗಡೆ





ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ಉಪಾಧ್ಯಕ್ಷ ಕೊಂಡಜ್ಜಿ ಬ ಷಣ್ಮುಗಪ್ಪ ಇವರು 29ನೇ ಕರ್ನಾಟಕ ರಾಜ್ಯ ಜಾಂಬೋರೇಟ್‌ನ ಪೋಸ್ಟಲ್ ಕವರ್ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಪೋಸ್ಟಲ್ ಜನರಲ್ ಮ್ಯಾನೇಜರ್ ಹಾಗೂ ಸಿಬ್ಬಂದಿಗಳು, ಕರ್ನಾಟಕ ರಾಜ್ಯ ಆಯುಕ್ತರು (ಸ್ಕೌಟ್ಸ್) ಎಂ. ಎ. ಖಾಲೀದ್, ರಾಜ್ಯ ಆಯುಕ್ತರು (ಗೈಡ್ಸ್) ಗೀತಾ ನಟರಾಜ್, ರಾಜ್ಯ ಕೋಶಾಧಿಕಾರಿ ಟಿ. ಪ್ರಭಾಕರ್, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಚಿನ್ನಸ್ವಾಮಿ ರೆಡ್ಡಿ, ಬೆಳಗಾವಿ ಜಿಲ್ಲಾ ಮುಖ್ಯ ಆಯುಕ್ತರು ಗಜಾನನ ಮನ್ನಿಕೇರಿ, ಜಿಲ್ಲಾ ಗೈಡ್ ಆಯುಕ್ತೆ ಪ್ರಭಾವತಿ ಪಾಟೀಲ್, ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತೆ ಅರ್ಪಿತಾ ಕೊಂಡಜ್ಜಿ ಮುಂತಾದವರು ಉಪಸ್ಥಿತರಿದ್ದರು




## ಜಾಂಬೋರೇಟ್ ಹ್ಯಾಂಡ್‌ಬುಕ್




## ಉಡುಪಿ ಡೇ ಆಚರಣೆ

ಜಾಂಬೋರೇಟ್‌ನಲ್ಲಿ ಉಡುಪಿ ಡೇ ಆಚರಿಸಲಾಯಿತು. ಉಡುಪಿಯ ಸ್ಕೌಟ್ಸ್ ಗೈಡ್ಸ್‌ಗಳು ಕಂಗೀಲು, ಯಕ್ಷಗಾನ, ಹುಲಿವೇಷ ಇನ್ನಿತರ ಸ್ಥಳೀಯ ನೃತ್ಯಪ್ರಕಾರಗಳನ್ನು ಪ್ರದರ್ಶಿಸಿದರು.













ವಿದ್ಯಾರ್ಥಿಗಳು ನಾಲ್ಕು ಗೋಡೆಯ ಹೊರಗೆ ಬಂದು ಪ್ರಪಂಚದಲ್ಲಿ ಜೀವಿಸಿ ಸ್ವತಂತ್ರ ಬದುಕು ರೂಪಿಸುವುದು ಹೇಗೆ ಎಂದು ಕಲಿಯಬೇಕು. ಈ ನಿಟ್ಟಿನಲ್ಲಿ ಇಲ್ಲಿ ಆಯೋಜನೆಗೊಳ್ಳಲಿರುವ ಎಲ್ಲಾ ಕಾರ್ಯಕ್ರಮಗಳು ಅವರ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗಲಿದೆ.

**ಮುಸ್ತಫಾ ರಾಜಾ**
ಸ್ಕೌಟ್ ಮಾಸ್ಟರ್, ದಾವಣಗೆರೆ



ನಾನು ಮೊದಲ ಬಾರಿಗೆ ಜಾಂಬೋರೇಟ್‌ನಲ್ಲಿ ಭಾಗವಹಿಸುತ್ತಿದ್ದು, ಶಿಸ್ತು ಹಾಗೂ ಧೈರ್ಯದ ಗುಣ ಇಲ್ಲಿ ಕಲಿಯಲು ಸಿಗುತ್ತೆ ಎಂಬ ನಿರೀಕ್ಷೆ ಇದೆ. ಜೊತೆಗೆ ಬೇರೆ ಜಿಲ್ಲೆಯವರೊಂದಿಗೂ ಸ್ನೇಹ ಬೆಳೆಸಿ, ಅಲ್ಲಿಯ ಸಂಸ್ಕೃತಿ, ಕಲೆಗಳ ಬಗ್ಗೆ ತಿಳಿದುಕೊಳ್ಳುವ ಆಸೆ ಇದೆ.

**ವೈಷ್ಣವಿ**
ಗೈಡ್, ಎಸ್‌ಆರ್‌ಎಸ್ ಶಾಲೆ, ಚಿತ್ರದುರ್ಗ



ಈ ಶಿಬಿರದಿಂದ ಮಕ್ಕಳು ವಿವಿಧ ಸ್ಕೌಟ್ & ಗೈಡ್ ಕೌಶಲ್ಯಗಳನ್ನು ಕಲಿತು, ತಮ್ಮಲ್ಲಿ ಧನಾತ್ಮಕ ಬದಲಾವಣೆಗಳನ್ನು ಕಾಣುತ್ತಾರೆ ಎಂಬ ನಿರೀಕ್ಷೆ ಇದೆ. ಈ ಮೂಲಕ ವಿದ್ಯಾರ್ಥಿಗಳಿಗೂ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿ, ಕೌಶಲ್ಯಭರಿತ ಜೀವನ ನಡೆವಂತಾಗಬೇಕು.

**ಮಣಿಕಂಠ ಕೆ.**
ಸ್ಕೌಟ್ ಕಂಟಿಂಜೆಂಟ್ ಲೀಡರ್, ಶಿವಮೊಗ್ಗ